ಇಟ್ಟು ಬರಲು ಹೋಗುವ ಹೊತ್ತಿನಲ್ಲಿ ಜೋರು ಮಳೆ ಸುರಿಯುತ್ತಿತ್ತು. ನಾನು ಸ್ವಲ್ಪ ತಲೆ ಉಪಯೋಗಿಸಿ ತಲೆಯ ಮೇಲೆ ಬಕೆಟ್ ಅನ್ನು ಬೋರಲು ಹಾಕಿಕೊಂಡು ಹೋಗುತ್ತಿದ್ದೆ. ಕಣ್ಣುಗಳು ನೆಲವನ್ನೇ ನೋಡುತ್ತಿದ್ದವು. ಅದೇ ಸಮಯಕ್ಕೆ ಕೆಮ್ಮು ಬಂದಿದ್ದರಿಂದ ಅದು ನನ್ನ ಕಿವಿಗೆ ಮೈಕ್‌ನ ಶಬ್ದದಂತೆ ಕೇಳಿಸಿದಂತಾಗಿ, ತಕ್ಷಣಕ್ಕೆ ಯಾವುದೋ ಹಾಡನ್ನು ಗುನುಗತೊಡಗಿದಾಗ ಕೇಳಲು ಖುಷಿಯಾಗಿ, ಬಕೆಟ್ ಅನ್ನು ಇನ್ನಷ್ಟು ಇಳಿಸಿಕೊಂಡೆ. ಆದರೆ, ದಾರಿ ಕಾಣದಂತಾಗಿ ಜಾರಿಬಿದ್ದೆ. ಮತ್ತೆ ಮತ್ತೆ ಏಳಲು ಪ್ರಯತ್ನಿಸಿ ಮತ್ತೆ ಮತ್ತೆ ಬೀಳುತ್ತಿದ್ದೆ. ಯಾವುದೋ ಕೊಳವೆಯಾಳಕ್ಕೆ ಬಿದ್ದಹಾಗೆ ಉಸಿರುಗಟ್ಟುತ್ತಿತ್ತು. ಯಾರೋ ನನ್ನ ಅವಸ್ಥೆಯನ್ನು ನೋಡಿ ಬಕೇಟನ್ನು ತೆಗೆದಿದ್ದರು. ನೋಡಿದರೆ ನಮ್ಮ ಕೇರಿಯ ಕಾಳಕ್ಕ. 'ಯಾಕ್ಲಾ ಸುಬ್ಬು ಹಿಂಗ್ ಬಿದ್ದಿದ್ದಿಯಾ?' ಎಂದಾಗ ನನಗೆ ನಗು-ಅಳು ಒತ್ತಟ್ಟಿಗೆ ಬರುತ್ತಿತ್ತು.

ನಾನು ಜಾರಿ ಬಿದ್ದ ಸುದ್ದಿ ಇಲ್ಲಿಗೆ ನಿಲ್ಲಲಿಲ್ಲ. ನಾನು ಆ ಬಕೆಟ್ ಅನ್ನು ಅಡುಗೆ ಮಾಡುವ ರೂಮಿಗೆ ಇಟ್ಟು ಬಂದಿದ್ದೆ. ಬಿದ್ದಿದ್ದಕ್ಕೆ ಕೈಗೆ ತರಚಿದ ಗಾಯವಾಗಿತ್ತು. ಆದರೆ, ನಾನು ಬಿದ್ದಿದ್ದು ನನ್ನ ಸಹಪಾಠಿಗಳಿಗೆಲ್ಲಾ ತಿಳಿದು, ಆ ಮಕ್ಕಳಲ್ಲಿ ಕೆಲವರು ನಾನು ಬಿದ್ದಾಗ ನನ್ನ ತಲೆಯಲ್ಲಿ ಬಕೆಟ್ ಸಿಕ್ಕಿಹಾಕಿಕೊಂಡಿದ್ದು, ನಾಳೆ ಆ ಬಕೆಟ್‌ನಲ್ಲಿ ಉಪ್ಪಿಟ್ಟು ತಂದರೆ ತಿನ್ನುವುದಿಲ್ಲ ಎಂದು ಮಾತನಾಡಿಕೊಳ್ಳುತ್ತಿದ್ದರು. ಈ ಗುಸುಗುಸು ರಾಮಯ್ಯ ಮೇಷ್ಟ್ರಿಗೆ ತಿಳಿದು, 'ಹೀಗೆ ಮೊದಲು ಹೇಳಿದ್ದು ಯಾರು?' ಎಂದು ಸಿಟ್ಟಿನಲ್ಲಿ ಕೇಳಿದರು. ಆಗ ನಾನು ನಡೆದ ವಿಷಯವನ್ನೆಲ್ಲ ಹೇಳಿದೆ. ಆಗ ಮೇಷ್ಟ್ರು ಎಲ್ಲರನ್ನು ನಿಲ್ಲಿಸಿ 'ಯಾರು ಹೇಳಿದರು? ಅವರ ಹೆಸರು ಹೇಳುವವರೆಗೂ ನಿಮ್ಮನ್ನು ಕೂರಿಸುವುದಿಲ್ಲ' ಎಂದು ಹೇಳಿದರು. ಇಡೀ ತರಗತಿ ನಿಶ್ಶಬ್ದವಾಗಿತ್ತು. ಸ್ವಲ್ಪ ಹೊತ್ತಾದರೂ ಯಾರು ಮಾತನಾಡದೆ ಇದ್ದಾಗ ರಾಮಯ್ಯ ಮೇಷ್ಟ್ರು ಖಡಕ್ಕಾಗಿ, 'ನಾಳೆಯಿಂದ ಹಾಜರಾತಿಯ ಪ್ರಕಾರ ಪ್ರತಿಯೊಬ್ಬರೂ ಕಸ ಗುಡಿಸಬೇಕು ಹಾಗೆಯೇ ಮೊದಲ ಬೆಂಚ್‌ನವರಿಂದ ಕೊನೆಯ ಬೆಂಚ್‌ವರೆಗೆ ಎಲ್ಲಾ ಹುಡುಗರು ಉಪ್ಪಿಟ್ಟನ್ನು ತಂದು ಬಕೆಟ್ ಅನ್ನು ತೊಳೆದು, ಅಡುಗೆ ಮನೆಯಲ್ಲಿ ಇಟ್ಟು ಬರಬೇಕು. ಇದನ್ನು ಯಾರಾದರೂ ತಪ್ಪಿಸಿದರೆ ಆಬ್ಸೆಂಟ್ ಹಾಕುತ್ತೇನೆ' ಎಂದು ಎಚ್ಚರಿಸಿ ಪಾಠ ಶುರು ಮಾಡಿದರು. ಮಳೆಯಿಂದಾಗಿ ಅನಧಿಕೃತವಾಗಿ ಚಾಲ್ತಿಯಲ್ಲಿದ್ದ ಅಸ್ಪೃಶ್ಯತೆ ಆಚರಣೆ ನಿಲ್ಲುವಂತಾಗಿದ್ದು ನನ್ನ ಜೀವನದಲ್ಲಿ ಮರೆಯಲಾಗದ ಘಟನೆಯಾಗಿತ್ತು. ಈ ಘಟನೆಯಿಂದಾಗಿ ತರಗತಿಯ ಸಹಪಾಠಿಗಳು ನನ್ನನ್ನು ಸರಿಯಾಗಿ ಮಾತನಾಡಿಸುತ್ತಿರಲಿಲ್ಲ, ಆಟಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಎಲ್ಲಿ ಎಲ್ಲರೂ ಸೇರಿಕೊಂಡು ಹೊಡೆಯುತ್ತಾರೋ ಎನ್ನುವ ಭಯ ನನ್ನನ್ನು ಕಾಡುತ್ತಿತ್ತು. ಒಂದೆರಡು ದಿನ ಶಾಲೆಗೆ ಚಕ್ಕರ್ ಹೊಡೆದೆ. ಇದನ್ನೆಲ್ಲ ನಮ್ಮ ಅಕ್ಕನಿಗೆ ಹೇಳಿದೆ. ಆಗ ಅಕ್ಕ, 'ರಾಮಯ್ಯ ಮೇಷ್ಟ್ರು ನಮ್ಮವರು, ಸರಿಯಾಗಿ ಮಾಡಿದ್ದಾರೆ. ನೀನು ಹೆದರ್ಕೋಬೇಡ, ಏನಾದರೂ ಹುಡುಗರು ಬೈದರೆ, ಹೊಡೆದರೆ ರಾಮಯ್ಯ ಮೇಷ್ಟ್ರಿಗೆ ಹೇಳು. ಅವರು ಸರಿಯಾಗಿ ಬುದ್ಧಿ ಕಲಿಸುತ್ತಾರೆ' ಎಂದು ಧೈರ್ಯ ಹೇಳಿ ಶಾಲೆಗೆ ಕಳುಹಿಸಿದಳು.

ಮಲೆನಾಡಿನ ಮಳೆಗಾಲ ಎಂದರೆ ಹಾಗೇ... ಸುರಿ ಮಳೆಯ ನೆನಪುಗಳು... ನಮ್ಮಂಥವರಿಗೆ ಮಳೆಗಾಲಕ್ಕೆ ಒಂದು ಛತ್ರಿ ತೆಗೆದುಕೊಳ್ಳುವುದು ಎಂದರೆ ಅವ್ವನ ನಾಲ್ಕೈದು ದಿನಗಳ ಕೂಲಿ ಆಗುತ್ತಿತ್ತು. ಆಗಿನ ಒಂದು ಛತ್ರಿಯ ಬೆಲೆ 6ರಿಂದ 10 ರೂಪಾಯಿ. ಅವ್ವನಿಗೆ ಕೂಲಿ ಸಿಗುತ್ತಿದ್ದುದು ಒಂದೂವರೆ ರೂಪಾಯಿ ಮಾತ್ರ. ನಮಗೆ ಛತ್ರಿ ತೆಗೆದುಕೊಳ್ಳುವುದು ಒಂದು ಕನಸು ಅಷ್ಟೇ. ಇದರ ಹೊರತಾಗಿ ಮಳೆಗಾಲದಲ್ಲಿ ಗೋಣಿ ಚೀಲದ ಗುಪ್ಪೆ, ಪ್ಲಾಸ್ಟಿಕ್, ಕೊನೆಗೆ ಅವ್ವ ಅಪ್ಪ ಬಳಸುತ್ತಿದ್ದ ಗೂರಗ... ತೀರಾ ಅರ್ಜೆಂಟಾಗಿ ಅಂಗಡಿಗೆ ಹೋಗಿ ಬರುವುದಕ್ಕೆ ಶರ್ಟಿನ ಒಂದು ಗುಂಡಿ ಬಿಚ್ಚಿದರೆ ತಲೆ ಮೇಲೆ ಕೊರಳು ಪಟ್ಟಿ ಬರುವಂತೆ ಎಳೆದುಕೊಂಡು ಓಡಾಡುವುದೇ ಒಂದು ಆನಂದ. ಯಾರದಾದರೂ ಛತ್ರಿ ಸಿಕ್ಕರೆ ಅದನ್ನು ಹಿಡಿದುಕೊಂಡು ತಿರುಗಿಸುತ್ತಾ ಹೋಗುವ ಖುಷಿಯನ್ನು ಬಣ್ಣಿಸಲಾಗುವುದಿಲ್ಲ. ಅಕಸ್ಮಾತ್ ಯಾರಾದರೂ ಊರಿಂದ ಬಂದವರು ಬೀಡಿ ಸಿಗರೇಟ್ ತರಲು ಹೇಳಿದರೆ ನಮ್ಮ ಗಮನ ಛತ್ರಿಯ ಕಡೆಗೆ ಹೋಗುತ್ತಿತ್ತು. ಅಕಸ್ಮಾತ್ ಅಂಗಡಿ ಹತ್ತಿರ ಛತ್ರಿ ಮರೆತು ಬಂದರೆ ಅಂತ ಯಾರಾದರೂ ಹೇಳಿದರೆ, ಛತ್ರಿ ಕನಸು ಅಷ್ಟೇ. 'ಏ... ಓಡಿ ಹೋಗಿ ತಗೊಂಡು ಬಾರೋ ಅಪ್ಪಣಿ...' ಅಂತಿದ್ದರು. 'ಸಿಗರೇಟ್ ಬೆಂಕಿಪಟ್ಟ ನೆಂದುಹೋದರೆ' ಅಂತ ನಾನು ಹೇಳಿದರೆ, 'ಹೋಗಲಿ ತಗೊಂಡು ಹೋಗು, ಛತ್ರಿ ಹಿಡೀನ ಗಟ್ಟಿಯಾಗಿ